ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಬೆಂಗಳೂರು

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.–05/2018 ದಿನಾಂಕ: 31–08–2018

## ಪಿಜಿಸಿಇಟಿ–2018 ದಾಖಲಾತಿ ಪರಿಶೀಲನೆಯ ವೇಳಾಪಟ್ಟಿ – ಎಂಬಿಎ / ಎಂಸಿಎ / ಎಂ.ಇ. / ಎಂ.ಟೆಕ್ ಕೋರ್ಸುಗಳಿಗೆ

- ಎಂಬಿಎ / ಎಂಸಿಎ / ಎಂ.ಇ. / ಎಂ.ಟೆಕ್ ಕೋರ್ಸುಗಳ ಪ್ರವೇಶಾತಿಗೆ ಅರ್ಹತೆಯನ್ನು ಪಡೆಯುವುದಕ್ಕಾಗಿ ದಾಖಲಾತಿ ಪರಿಶೀಲನೆಯನ್ನು ಈ ಕೆಳಕಂಡ ವೇಳಾಪಟ್ಟಿಯಂತೆ ನಡೆಸಲಾಗುವುದು. ವಿದ್ಯಾರ್ಥಿ/ನಿ ಅರ್ಹನಾ/ಳಾಗಿರುವ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಒಂದೇ ಸಲ ದಾಖಲೆಗಳ ಪರಿಶೀಲನೆಯನ್ನು ನಡೆಸಲಾಗುವುದು.
- ಒಂದಕ್ಕಿಂತ ಹೆಚ್ಚಿನ ವಿಭಾಗಗಳಲ್ಲಿ ಅರ್ಹತೆ ಪಡೆದಿದ್ದ ಪಕ್ಷದಲ್ಲಿ, ಆಗ ಆ ಎಲ್ಲಾ ಡಿಸಿಪ್ಲಿನಿಗೆ ಸಂಬಂಧಿಸಿದಂತೆ ಒಂದೇ ಸಲ ದಾಖಲೆಗಳ ಪರಿಶೀಲನೆಯನ್ನು ಮಾಡಲಾಗುವುದು.
- ಸಾಮಾನ್ಯ ವರ್ಗ, ಮೀಸಲಾತಿ ಪ್ರವರ್ಗಗಳು ಮತ್ತು ವಿಶೇಷ ಪ್ರವರ್ಗದ ಎಲ್ಲಾ ವಿದ್ಯಾರ್ಥಿಗಳು, ಗೊತ್ತುಪಡಿಸಿದ ಯಾವುದೇ ನೋಡಲ್ ಕೇಂದ್ರಗಳಲ್ಲಿ ಈ ಮುಂದಿನ ವೇಳಾಪಟ್ಟಿಗನುಸಾರವಾಗಿ, ತಮ್ಮ ದಾಖಲೆಗಳನ್ನು ಪರಿಶೀಲನೆ ಮಾಡಿಸಿಕೊಳ್ಳಬಹುದು. ಆದರೆ ಕರ್ನಾಟೇಕತರ ಅಭ್ಯರ್ಥಿಗಳು. ಗೇಟ್ ಅರ್ಹ ಅಭ್ಯರ್ಥಿಗಳು, Sponsor ಕೊಟದ ಅಭ್ಯರ್ಥಿಗಳು, ಪಾರ್ಟ ಟೈಮ್ ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆಗೆ ಬೆಂಗಳೂರು ಕೇಂದ್ರದಲ್ಲಿ ಹಾಜರಾಗಬೇಕು.

| ದಿನಾಂಕ | ವಿಶೇಷ ಪ್ರವರ್ಗ | ಪರಿಶೀಲನೆಯ ವಿವರ | ಸಮಯ | ಸ್ಥಳ |
|---|---|---|---|---|
| 07–09–2018 | ವಿಕಲಚೇತನರು | ವೈದ್ಯಕೀಯ ತಪಾಸಣೆ | 11.30 ರಿಂದ | ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು |
| | ಮಾಜಿ ಸೈನಿಕರು (ಎಂಬಿಎ ಮತ್ತು ಎಂಸಿಎ ಅಭ್ಯರ್ಥಿಗಳಿಗೆ ಮಾತ್ರ) | ನಿರ್ದೇಶಕರು, ಮಾಜಿ ಸೈನಿಕರ ಇಲಾಖೆಯಿಂದ ಪಡೆದ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು | | |

ಎಂಬಿಎ / ಎಂಸಿಎ / ಎಂಸಿಎ ಲ್ಯಾಟರಲ್ ಪ್ರವೇಶ / ಎಂ.ಇ. / ಎಂ.ಟೆಕ್ ಕೋರ್ಸುಗಳಿಗೆ

| ದಿನಾಂಕ | **ಬೆಳಗಿನ ಅವಧಿ –1 ಬೆ.9.00 ರಿಂದ 11.00 ಹಾಜರಾಗುವ ಸಮಯ: ಬೆ. 8.45** ರ್ಯಾಂಕ್ ಸಂಖ್ಯೆಗಳು | | **ಬೆಳಗಿನ ಅವಧಿ –2 ಬೆ.11.15 ರಿಂದ ಮ.1.15 ಹಾಜರಾಗುವ ಸಮಯ: ಬೆ. 10.45** ರ್ಯಾಂಕ್ ಸಂಖ್ಯೆಗಳು | | **ಮಧ್ಯಾಹ್ನದ ಅವಧಿ –1 ಮ.2.00 ರಿಂದ ಮ.4.00 ಹಾಜರಾಗುವ ಸಮಯ: ಮ. 1.30** ರ್ಯಾಂಕ್ ಸಂಖ್ಯೆಗಳು | | **ಮಧ್ಯಾಹ್ನದ ಅವಧಿ –1 ಸಂ.4.15 ರಿಂದ 6.15 ಹಾಜರಾಗುವ ಸಮಯ: ಮ. 3.30** ರ್ಯಾಂಕ್ ಸಂಖ್ಯೆಗಳು | |
|---|---|---|---|---|---|---|---|---|
| | ಇಂದ | ವರೆಗೆ | ಇಂದ | ವರೆಗೆ | ಇಂದ | ವರೆಗೆ | ಇಂದ | ವರೆಗೆ |
| 10–09–2018 | **1** | **600** | **601** | **1200** | **1201** | **1700** | **1701** | **2000** |
| 11–09–2018 | **2001** | **2900** | **2901** | **3800** | **3801** | **4500** | **4501** | **5000** |
| 14–09–2018 | **5001** | **6200** | **6201** | **7400** | **7401** | **8300** | **8301** | **9000** |
| 15–09–2018 | **9001** | **10500** | **10501** | **12000** | **12001** | **13200** | **13201** | **14000** |
| 16–09–2018 | **14001** | **16000** | **16001** | **18000** | **18001** | **19000** | **19001** | **20000** |
| 17–09–2018 | **20001** | **ಕೊನೆಯ ರ್ಯಾಂಕ್** | Type – B - M.E. / M.Tech. all candidates | | | – | | |

ದಾಖಲೆಗಳ ಪರಿಶೀಲನೆಯ ನಂತರ ಅರ್ಹರಾಗುವಂತಹ ವಿದ್ಯಾರ್ಥಿಗಳನ್ನು ಮಾತ್ರ, ಅವರು ತಮ್ಮ ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ಪರಿಗಣಿಸಲಾಗುವುದು. ದಾಖಲಾತಿ ಪರಿಶೀಲನೆಗೆ **ಸಲ್ಲಿಸಬೇಕಾದ ಮೂಲ ದಾಖಲೆಗಳ ವಿವರಗಳನ್ನು ಪಿಜಿಸಿಇಟಿ–2018ರ ಇ–ಬ್ರೋಚರ್‌ನಲ್ಲಿ ಪ್ರಕಟಿಸಲಾಗಿದೆ.**

| Sl. No. | Option Entry Schedule – First Round | | Option Entry Schedule – Second and Final Round | |
|---|---|---|---|---|
| | Particulars | Date and Time | Particulars | Date and Time |
| 01 | ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳ ಪ್ರಕಟಣೆ | 14-09-2018 After 2.00 pm | ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳ ಪ್ರಕಟಣೆ | 01-10-2018 after 2.00 pm |
| 02 | ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು. (ಆದ್ಯತಾ ಕ್ರಮದಲ್ಲಿ) | From 6.00 pm on 14-09-2018 to 20-09-2018 up to 10.00 am | ಆಯ್ಕೆಗಳನ್ನು ಬದಲಾಯಿಸಲು ಅವಕಾಶ (ಅಳಿಸಿ / ಬದಲಾಯಿಸಿ / ಮಾರ್ಪಡಿಸಿ) | From 4.00 pm on 01-10-2018 to 03-10-2018 up to 10.00 am |
| 03 | ಅಣುಕು ಸೀಟು ಹಂಚಿಕೆಯ ಫಲಿತಾಂಶ | 20-09-2018 after 6.00 pm | - | |
| 04 | ಆಯ್ಕೆಗಳನ್ನು ಬದಲಾಯಿಸಲು ಅವಕಾಶ (ಸೇರಿಸಿ / ಅಳಿಸಿ / ಬದಲಾಯಿಸಿ / ಮಾರ್ಪಡಿಸಿ) | From 8.00 pm on 20-09-2018 to 24-09-2018 up to 10.00 am | | |
| 05 | ನೈಜ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | 24-09-2018 after 5.00 pm | ಎರಡನೇ ಹಾಗು ಅಂತಿಮ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | 03-10-2018 after 6.00 pm |
| 06 | ಸೀಟು ಹಂಚಿಕೆಯಾದ ಅಭ್ಯರ್ಥಿಗಳು Choice ಅನ್ನು ಆಯ್ಕೆ ಮಾಡಲು (ನಾಲ್ಕು Choice ಗಳಲ್ಲಿ ಸೂಕ್ತವಾದ Choice ಅನ್ನು ಆಯ್ಕೆ ಮಾಡಿ) | 25-09-2018 to 26-09-2018 | ಶುಲ್ಕ ಪಾವತಿ ಮಾಡುವುದು – ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳುವುದು | 04-10-2018 to 05-10-2018 |
| 07 | a. ಶುಲ್ಕ ಪಾವತಿ ಮಾಡುವುದು – Choice-1 and Choice-2 ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ಮಾತ್ರ<br>b. ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳುವುದು – Choice-1 ಅಭ್ಯರ್ಥಿಗಳಿಗೆ ಮಾತ್ರ – ಶುಲ್ಕ ಪಾವತಿಯ ನಂತರ | 25-09-2018 to 27-09-2018 | - | - |
| 08 | Choice-1 ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಕಾಲೇಜಿನಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ | 28-09-2018 before 5.30 pm | ಅಭ್ಯರ್ಥಿಗಳು ಕಾಲೇಜಿನಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ | 06-10-2018 before 5.30 pm |

- ಅಭ್ಯರ್ಥಿಗಳು, ದಾಖಲೆಗಳ ಪರಿಶೀಲನೆಗೆ ಸಂಬಂಧಿಸಿದಂತೆ ಗೊತ್ತುಪಡಿಸಿರುವ ವೇಳಾಪಟ್ಟಿ ಪ್ರಕಾರ ಯಾವುದಾದರೂ ಸಹಾಯಕ ಕೇಂದ್ರದಲ್ಲಿ ಖುದ್ದಾಗಿ ಹಾಜರಿರಬೇಕು. **ಅಂದರೆ, ಅವರ ಪರವಾಗಿ ಬೇರೆ ಯಾರೂ ಹಾಜರಾಗುವಂತಿಲ್ಲ ಅಥವಾ ಅವರ ಪರವಾಗಿ ಬಂದಿರುವ ಯಾರೇ ಪ್ರತಿನಿಧಿಗಳಿಗೆ ಹಾಜರಾಗಲು ಅವಕಾಶ ನೀಡುವುದಿಲ್ಲ.**
- ವಿದ್ಯಾರ್ಥಿಗಳು ದಾಖಲೆಗಳ ಪರಿಶೀಲನೆಗೆ ಬರುವ ಸಮಯದಲ್ಲಿ, ತಾವು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕೋರಿರುವ ಕ್ಲೇಮುಗಳಿಗೆ ಪೂರಕವಾದ ಎಲ್ಲಾ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ತರಬೇಕು. ಪರಿಶೀಲನೆಯ ದಿನದಂದು ಯಾವುದೇ ದಾಖಲೆ/ ಪ್ರಮಾಣಪತ್ರ / ಅಂಕಪಟ್ಟಿಯನ್ನು ಹಾಜರುಪಡಿಸಲು ಯಾರೇ ವಿದ್ಯಾರ್ಥಿ ವಿಫಲನಾದ ಪಕ್ಷದಲ್ಲಿ, ಅಂಥ ವಿದ್ಯಾರ್ಥಿಯ ದಾಖಲೆಗಳನ್ನು ಪರಿಶೀಲನೆ ಮಾಡುವುದಿಲ್ಲ ಮತ್ತು ಅವರ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದಿಲ್ಲ. ಆನಂತರ ಅವರು ತಮ್ಮ ಇಚ್ಛೆ (option) ಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಅವರನ್ನು ಪರಿಗಣಿಸುವುದಿಲ್ಲ.
- ಮೊದಲನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದ ನಂತರ, ಸೀಟನ್ನು ರದ್ದುಪಡಿಸಿಕೊಳ್ಳಬೇಕಾದಲ್ಲಿ ದಿನಾಂಕ 03–10–2018 ರ ಬೆ.10.00 ರೊಳಗೆ ಪ್ರಾಧಿಕಾರದಲ್ಲಿ ರದ್ದುಪಡಿಸಿಕೊಳ್ಳಬೇಕು.
- ವಿವಿಧ ಅರ್ಹತಾ ಕಂಡಿಕೆಗಳ ವಿವರಗಳು, ಇಚ್ಛೆ / ಆಯ್ಕೆ ದಾಖಲಿಸುವ ವಿವರಗಳು, ಛಾಯ್ಸ್ ಅನ್ನು ಆಯ್ಕೆ ಮಾಡುವ ವಿವರಗಳು, ಸೀಟು ರದ್ದುಪಡಿಸಿಕೊಳ್ಳುವ ವಿವರಗಳು, ಕಾಲೇಜಿನಲ್ಲಿ ಪ್ರವೇಶ ಪಡೆಯುವುದರ ಮತ್ತು ಇನ್ನಿತರ ವಿವರಗಳ ಬಗ್ಗೆ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ "ಪಿಜಿಸಿಇಟಿ – 2018 ರ ಮಾಹಿತಿ ಪುಸ್ತಕ" ವನ್ನು ನೋಡಲು ಕೋರಿದೆ.

ಸಹಿ/–
**ಕಾರ್ಯನಿರ್ವಾಹಕ ನಿರ್ದೇಶಕರು.**

ವಿ.ಸೂ. ಮೇಲ್ಕಂಡ ವೇಳಾಪಟ್ಟಿಯ ಬಗ್ಗೆ ವೈಯಕ್ತಿಕವಾಗಿ ಮಾಹಿತಿಯನ್ನು ಕಳುಹಿಸಲಾಗುವುದಿಲ್ಲ.